1	2	3	4
23.	Suyla-Phernaja-Aiyanakatte-Sulya	-do-	-do-
24.	Sulya-Kukkajadaka-Bellare-Perupaje	-do-	-do-
25.	Sulya-Thodikana	-do-	-do-
26.	Panja-Puttur	-do-	-do-
27.	Sulya-Valbechalu	Non Nationalised	-do-
28.	Koinadu-Madakeri	Nationalised	-do-
29.	Kasmadi-Puttur	-do-	-do-
30.	Mandekolu-Sulya	Non Nationalised.	-do-

ಪುತ್ತೂರು ರಸ್ತೆ ಸಾರಿಗೆ ಡಿಪೋದಲ್ಲಿ ರಾತ್ರಿ ಚಾಲಕರಾಗಿ ಕಾರ್ಯನಿರ್ವಹಿಸಿದ ಸಿಬ್ಬಂದಿಗಳಿಗೆ ಬೆಳಿಗ್ಗೆ ಪ್ರಥಮ ಟ್ರಿಪ್ ಕಾರ್ಯ ವಹಿಸುತ್ತಿರುವುದು.

1525(2218) ಶ್ರೀ ಎಸ್. ಅಂಗಾರ, (ಸೂಳ್ಯ) :— ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪುತ್ತೂರು ಕೆ.ಎಸ್.ಆರ್.ಟಿ.ಸಿ. ಡಿಪೋದಲ್ಲಿ ರಾತ್ರಿ ಚಾಲಕರಾಗಿ ಕಾರ್ಯ ನಿರ್ವಹಿಸಿದಂತಹ ಸಿಬ್ಬಂದಿಗಳಿಗೆ ಬೆಳಿಗ್ಗೆ ಪ್ರಥಮ ಟ್ರಿಪ್ ಕಾರ್ಯನಿರ್ವಹಿಸುವಂತೆ ಸರ್ಕಾರ ಆದೇಶನೀಡಿದೆಯೇ?

ಶ್ರೀ ಬಿ.ಎನ್. ಬಚ್ಚೇಗೌಡ (ಸಾರಿಗೆ ಸಚಿವರು) :—

ಅ) ಇಲ್ಲಾ

ಮುಜರಾಯಿ ದೇವಾಲಯದ ಅರ್ಚಕರ ಸಂಬಳ.

1526(1721) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) :— ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ರಾಜ್ಯದಲ್ಲಿರುವ ಮುಜರಾಯಿ ದೇವಸ್ಥಾನಗಳಲ್ಲಿ ಅರ್ಚಕರಾಗಿ ಕೆಲಸ ಮಾಡುತ್ತಿರುವ ಸಿಬ್ಬಂದಿಗಳ ಒಟ್ಟು ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು)